# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ.ಆರ್. ಮೋಹನ್



### ಛಾಯಾಚಿತ್ರ – ೩೦

ಸ್ವಾಮೀಜಿ ಇಂಗ್ಲೆಂಡ್ ಬಿಡುವ ಮುಂಚೆ ಅವರ ಶಿಷ್ಯೆ ಮಿಸ್ ಎಮ್ಮೆಲಿನ್ ಸೌದರ್ (Miss Emmeline Souter), ಒಬ್ಬ ಪರಿಣತ ಛಾಯಾ ಗ್ರಾಹಕನಾದ ಆಲ್ಫ್ರೆಡ್ ಎಲ್ಲಿಸ್ (Alfred Ellis) ಮೂಲಕ ಸ್ಟುಡಿಯೋದಲ್ಲಿ ಸ್ವಾಮೀಜಿಯವರ ಆರು ವಿವಿಧ ಚಿತ್ರಗಳನ್ನು ತೆಗೆಸಿದರು. ಅವುಗಳಲ್ಲಿ ಇದೂ ಒಂದು. "ಸ್ವಾಮೀಜಿಯದು ಮಿಂಚುವ ಮುಖ. ಅವರು ತಮ್ಮ ಮಾನವ ಸ್ವಭಾವವನ್ನು ಅಳಿಸಿಹಾಕಿಕೊಂಡಿದ್ದರು; ಅತ್ಯುನ್ನತ ದಿವ್ಯಹಂತದಲ್ಲಿ ಇದ್ದವರಂತೆ ಕಂಡುಬರುತ್ತಿದ್ದರು. ಅದು ಹೇಗಿತ್ತೆಂದರೆ, ಅವರ ಹಿಂದಿನ ವ್ಯಕ್ತಿತ್ವವೇ ನಾಶವಾಗಿ, ಅದರ ಜಾಗದಲ್ಲಿ ಒಬ್ಬ ಪ್ರಭಾವಶಾಲಿ ಚೈತನ್ಯಪುರುಷನು ಇರುವಂತೆ ಭಾಸವಾಗುತ್ತಿತ್ತು" ಎಂದು ಸ್ವಾಮೀಜಿಯ ತಮ್ಮಂದಿರಾದ ಶ್ರೀ ಮಹೇಂದ್ರನಾಥ ದತ್ತರು ಒಮ್ಮೆ ಉದ್ಗರಿಸುತ್ತಾರೆ.



ಚಿತ್ರ : ೩೦

ಸ್ವಾಮೀಜಿ ಲಂಡನ್ನಿನಲ್ಲಿ ಜ್ಞಾನಯೋಗದ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದಾಗ, ಅಂತಹ ಅತೀಂದ್ರಿಯ ಸ್ಥಿತಿಯಲ್ಲಿ ಇರುವಂತೆ ಕಾಣಿಸಿಕೊಳ್ಳುತ್ತಿದ್ದರು. ಆಗ ಅವರು ದಿವ್ಯತೆಯ ಅಂಚಿನಲ್ಲಿ ಇದ್ದಾರೇನೋ ಎಂಬಂತೆ ಕಾಣಬರುತ್ತಿದ್ದರು. ಹೀಗೆ ದಿವ್ಯತೆಯು ಅವರಲ್ಲಿ ಢಾಳಾಗಿ ಕಂಡುಬರುತ್ತಿದ್ದರೂ, ಅವರು ಅನಂತ ದಯಾಪೂರಿತರಾಗಿದ್ದರು.

### ಛಾಯಾಚಿತ್ರ – ೩೧

ಮಿಸ್ ಎಮ್ಮೆಲಿನ್ ಸೌದರ್ (Miss Emmeline Souter) ಸ್ಟುಡಿಯೋದಲ್ಲಿ ತೆಗೆಸಿದ ಸ್ವಾಮೀಜಿಯವರ ೬ ವಿವಿಧ ಚಿತ್ರಗಳಲ್ಲಿ ಇದು ಇನ್ನೊಂದು ಚಿತ್ರ.



ಚಿತ್ರ : ೩೧

೧೮೯೬ ರಲ್ಲಿ ಸ್ವಾಮಿ ಅಭೇದಾನಂದಜಿ ಅವರು ಇಂಗ್ಲೆಂಡಿನಲ್ಲಿ ತಮ್ಮ ಮೊದಲ ಭಾಷಣವನ್ನು ಮಾಡಿದರು. ಈ ಸಂದರ್ಭದ ಒಂದು ಸ್ವಾರಸ್ಯಕರ ಪ್ರಸಂಗ ಹೀಗಿದೆ: ಮೊದಲು ಸ್ವಾಮೀಜಿ 'God in Everything' – 'ದೇವರೆಲ್ಲದರಲ್ಲಿ' ಎಂಬ ವಿಷಯವಾಗಿ ಒಂದು ತರಗತಿಯನ್ನು ತೆಗೆದುಕೊಂಡರು. ಅನಂತರ ಸ್ವಾಮಿ ಅಭೇದಾನಂದರು ಮಾತನಾಡಬೇಕಾಗಿತ್ತು. ಆದರೆ ಅದಕ್ಕೆ ಅವರು ಒಪ್ಪಲಿಲ್ಲ. ಅವರು ವಿವೇಕಾನಂದರಿಗೆ

ಹೇಳಿದರು: “ನರೇನ್, ಇಂದು ಮಧ್ಯಾಹ್ನ ನಾನು ಮಾತನಾಡಲು ಇಚ್ಛಿಸುವುದಿಲ್ಲ. ಇನ್ನು ಯಾವಾಗಲಾದರೂ ಮಾತನಾಡು ತ್ತೇನೆ...” ಆಗ ಅಭೇದಾನಂದರಿಗಿಂತಲೂ ದೃಢಕಾಯರಾಗಿದ್ದ ಸ್ವಾಮೀಜಿ ಹೀಗೆ ಗುಡುಗಿದರು: “ಕಾಳಿ, ನೀನು ಭಾಷಣ ಮಾಡಲೇಬೇಕು. ಇಲ್ಲದಿದ್ದರೆ, ಈ ಕಿಟಕಿಯಾಚೆ ನಿನ್ನನ್ನು ಎಸೆದುಬಿಡುತ್ತೇನೆ.”

### ಛಾಯಾಚಿತ್ರ – ೫೨

ಮಿಸ್ ಎಮ್ಮೆಲಿನ್ ಸೌದರ್ (Miss Emmeline Souter) ಸ್ಟುಡಿಯೋದಲ್ಲಿ ತೆಗೆಸಿದ ಸ್ವಾಮೀಜಿಯವರ ೬ ವಿವಿಧ ಚಿತ್ರಗಳಲ್ಲಿ ಇದು ಮತ್ತೊಂದು ಚಿತ್ರ.

ಚಿತ್ರ : ೫೨



ಸ್ವಾಮೀಜಿ ಇಂಗ್ಲೆಂಡನ್ನು ಬಿಡುವ ಮುಂಚೆ ಸ್ವಾಮಿ ಶಾರದಾ ನಂದರಿಗೆ ಬರೆದ ಒಂದು ಪತ್ರದಲ್ಲಿ ಹೀಗೆ ಹೇಳುತ್ತಾರೆ:

“ನನ್ನ ಗುರುದೇವನು ನನ್ನ ಮೇಲೆ ಹೊರಿಸಿದ ಜವಾಬ್ದಾರಿ ಯನ್ನು ಕಾರ್ಯಗತಗೊಳಿಸಲು ನಾನು ನನ್ನಿಂದಾದಷ್ಟೂ ಪ್ರಯತ್ನಿಸಿದ್ದೇನಲ್ಲ, ಅಷ್ಟಕ್ಕೇ ನಾನು ಸಂತೋಷಪಟ್ಟುಕೊಳ್ಳುತ್ತೇನೆ. ನಾನು ಮಾಡಿದ್ದನ್ನು ಚೆನ್ನಾಗಿ ಮಾಡಿದ್ದೇನೋ ಇಲ್ಲವೋ, ಆದರೆ ನಾನು ಪ್ರಯತ್ನವನ್ನಂತೂ ಮಾಡಿದ್ದೇನಲ್ಲ, ಅದಕ್ಕೇ ಸಂತೋಷಪಟ್ಟುಕೊಳ್ಳುತ್ತೇನೆ.

“ಸರಿ, ನಿಮಗೆಲ್ಲರಿಗೂ ನಮಸ್ಕಾರ. ನನ್ನ ಜೀವನದ ಒಂದು ಅಧ್ಯಾಯ ಮುಗಿಯಿತು. ನಾನಿನ್ನು ಬರುತ್ತೇನೆ. ಎಂದೆಂದೂ ನಿಮ್ಮ ಮೇಲೆ ಭಗವಂತನ ಕೃಪೆಯಿರಲಿ.”

ಚಿತ್ರ : ೫೩



### ಛಾಯಾಚಿತ್ರ – ೫೩

ಮಿಸ್ ಎಮ್ಮೆಲಿನ್ ಸೌದರ್ (Miss Emmeline Souter) ಸ್ಟುಡಿಯೋದಲ್ಲಿ ತೆಗೆಸಿದ ಸ್ವಾಮೀಜಿಯವರ ೬ ವಿವಿಧ ಚಿತ್ರಗಳಲ್ಲಿ ಇದು ಕಡೆಯ ಚಿತ್ರ. ಇಲ್ಲಿ ಸ್ವಾಮೀಜಿ ತಮ್ಮ ಸರಳ ಉಡುಪಿನಲ್ಲಿ ಚೆನ್ನಾಗಿ ಕಾಣಿಸುತ್ತಿದ್ದಾರೆ.

೧೮೯೬ ರ ನವೆಂಬರ್ ೨೬ ರಂದು ಸ್ವಾಮೀಜಿ ಅಮೆರಿಕೆಗೆ ಮತ್ತೆ ಹೊರಟರು. ಭಗವಂತನು ತಮ್ಮ ಮೂಲಕ ಇಂಗ್ಲೆಂಡಿನಲ್ಲಿ ಯಶಸ್ವಿ ಕಾರ್ಯವನ್ನು ಮಾಡಿಸಿದ್ದಕ್ಕೆ ಸ್ವಾಮೀಜಿ ಬಹಳ ಸಂತೋಷಪಟ್ಟರು. ಇದರಿಂದ ತಮ್ಮ ಸಂದೇಶ ಪ್ರಸಾರಕಾರ್ಯವು ನಿರಾತಂಕವಾಗಿ ನಡೆಯುತ್ತಿದೆ ಎಂದು ಸ್ವಾಮೀಜಿಯವರಿಗೆ ಭರವಸೆಯುಂಟಾಯಿತು.

ಪಾಶ್ಚಾತ್ಯ ದೇಶಗಳ ಮೊದಲ ಯಾತ್ರೆಯಲ್ಲಿ ತೆಗೆದ ಸ್ವಾಮಿ ವಿವೇಕಾನಂದರ ಚಿತ್ರಗಳ ಪರಿಚಯವು ಇದರೊಂದಿಗೆ ಮುಗಿ ಯಿತು.

ಸ್ವಾಮೀಜಿ ಭಾರತಕ್ಕೆ ೧೮೯೭ ರಲ್ಲಿ ಮರಳಿ ಬಂದ ಮೇಲೆ ತೆಗೆದ ಚಿತ್ರಗಳ ಪರಿಚಯವನ್ನು, ‘ವಿವೇಕಪ್ರಭ’ ದ ೨೦೧೩ರ ಫೆಬ್ರವರಿ ಸಂಚಿಕೆಯಲ್ಲಿ ಮಾಡಿಕೊಡಲು ಆರಂಭಿಸಲಾಗು ವುದು.



## ಉಪನಿಷನ್ಮಂಜರಿ

ಉಪನಿಷತ್ತುಗಳಲ್ಲಿ ಪ್ರಶ್ನೋತ್ತರ ರೀತಿಯ ವಿಚಾರ ವಿಮರ್ಶೆಯನ್ನೇ ಪ್ರಮುಖವಾಗಿ ಕಾಣುತ್ತೇವೆ. ಅದರಲ್ಲೂ ಆರು ಶಿಷ್ಯರು ಕೇಳಿದ ಪ್ರಶ್ನೆಗಳಿಗೆ ಗುರು ಉತ್ತರಿಸುವ ಒಂದು ಉಪನಿಷತ್ತು ಪ್ರಶ್ನೋಪನಿಷತ್ತು ಎಂದೇ ಪ್ರಸಿದ್ಧವಾಗಿದೆ. ಚಿರಂತನ ಸತ್ಯ ತತ್ತ್ವದ ಹಲವು ಆಯಾಮಗಳನ್ನು ಈ ಪ್ರಶ್ನೆಗಳು ಬಿಡಿಸಿ ಹೇಳುತ್ತವೆ. ಇದರ ಸರಳ, ಆದರೆ ವಿದ್ವತ್ಪೂರ್ಣವಾದ ಪರಿಚಯವನ್ನು ಮಾಡಿಕೊಟ್ಟಿರುವ ಡಾ. ವಿ. ಶ್ರೀಮತಿ ಅವರು ಮೈಸೂರಿನ ದೇವರಾಜ ಸರ್ಕಾರಿ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

# ಪ್ರಶ್ನೋಪನಿಷತ್

**ಡಾ. ವಿ. ಶ್ರೀಮತಿ**

ಉಪನಿಷತ್ತುಗಳು ಭಾರತೀಯ ಅಧ್ಯಾತ್ಮಜ್ಞಾನದ ಉತ್ತುಂಗ ಶಿಖರಗಳು; ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಋಷಿಗಳ ವಾಣಿಗಳು; ಮಾನವ ಜೀವನದ ಸಾರ್ಥಕತೆಯನ್ನೂ, ಸಾಫಲ್ಯವನ್ನೂ ಪ್ರತಿಪಾದಿಸಿರುವ ಶ್ರೇಷ್ಠ ಸಾಹಿತ್ಯರಾಶಿ.

ದಶೋಪನಿಷತ್ತುಗಳಲ್ಲಿ ಒಂದಾಗಿರುವ ಪ್ರಶ್ನೋಪನಿಷತ್ತು ಅಥರ್ವವೇದಕ್ಕೆ ಸೇರಿರುವುದು. ಇದು ಗದ್ಯರೂಪದಲ್ಲಿದೆ. ಜಿಜ್ಞಾಸು ಶಿಷ್ಯರ ಆರು ಪ್ರಶ್ನೆಗಳು ಹಾಗೂ ಬ್ರಹ್ಮಜ್ಞಾನಿ ಗುರುವಿನ ಉತ್ತರಗಳಿಂದ ಕೂಡಿದೆ ಈ ಉಪನಿಷತ್ತು.

**ಮೊದಲ ಪ್ರಶ್ನೆ:** ಭರದ್ವಾಜನ ಪುತ್ರನಾದ ಸುಕೇಶ, ಶಿಬಿಯ ಪುತ್ರ ಸತ್ಯಕಾಮ, ಗರ್ಗನ ವಂಶಸ್ಥನಾದ ಸೌರ್ಯಾಯಣಿ, ಅಶ್ವಲನ ಪುತ್ರ ಕೌಸಲ್ಯ, ವಿದರ್ಭ ದೇಶದ ಭಾರ್ಗವ, ಕತ್ಯನ ಪುತ್ರ ಕಬಂಧಿ – ಈ ಆರು ಜನ ಶಿಷ್ಯರು ಬ್ರಹ್ಮಜ್ಞಾನವನ್ನು ಪಡೆಯಬೇಕೆಂದು ಸಮಿತ್ಪಾಣಿಗಳಾಗಿ ಗುರುವಾದ ಪಿಪ್ಪಲಾದರ ಬಳಿಗೆ ಬರುತ್ತಾರೆ. ಇವರೆಲ್ಲರೂ ಬ್ರಹ್ಮಪರರೂ ಬ್ರಹ್ಮನಿಷ್ಠರೂ ಆಗಿದ್ದರು. ತತ್ತ್ವಜಿಜ್ಞಾಸೆಯನ್ನು ಮಾಡಿ ವಿಷಯವನ್ನು ಅರ್ಥೈಸಿಕೊಂಡಿದ್ದರೂ, ಅದನ್ನು ಆಮೂಲಾಗ್ರವಾಗಿ ಅರಿಯಬೇಕೆಂಬ ಅಪೇಕ್ಷೆ ಇವರನ್ನು ಗುರುವನ್ನು ಅರಸುವಂತೆ ಪ್ರಚೋದಿಸಿತು. ತಮ್ಮ ಬಳಿಗೆ ಆಗಮಿಸಿದ ಶಿಷ್ಯರಿಗೆ ಪಿಪ್ಪಲಾದರು, "ಒಂದು ವರ್ಷ ಕಾಲ ಶ್ರದ್ಧೆಯಿಂದ ತಪಸ್ಸು ಮತ್ತು ಬ್ರಹ್ಮಚರ್ಯೆಯಲ್ಲಿ ಕಳೆಯಿರಿ. ಅನಂತರ ನನಗೆ ತಿಳಿದಿದ್ದನ್ನು ಹೇಳುತ್ತೇನೆ" ಎನ್ನುತ್ತಾರೆ.

ಶಿಷ್ಯರ ಶ್ರದ್ಧೆ, ನಿಷ್ಠೆ, ಜ್ಞಾನಪಿಪಾಸುತ್ವ, ಜ್ಞಾನದ ಮಟ್ಟ ಇವುಗಳನ್ನು ಅರಿತ ನಂತರವೇ ಅಧ್ಯಾತ್ಮ ವಿದ್ಯೆಯನ್ನು ನೀಡುವುದು ಪ್ರಾಚೀನ ಆಚಾರ್ಯರ ಸಂಪ್ರದಾಯವಾಗಿತ್ತು. ಅದನ್ನೇ ಗುರು ಪಿಪ್ಪಲಾದರು ಇಲ್ಲಿ ಪರಿಪಾಲಿಸಿದ್ದಾರೆ.

ಒಂದು ವರ್ಷ ಕಾಲ ಶ್ರದ್ಧೆಯಿಂದ ಗುರುವಿನ ಆಣತಿಯಂತೆ ತಪಸ್ಸು, ಬ್ರಹ್ಮಚರ್ಯಗಳಲ್ಲಿ ಕಳೆದ ನಂತರ ಕಬಂಧಿಯು ಮೊದಲ ಪ್ರಶ್ನೆಯನ್ನು ಕೇಳುವನು: **"ಪೂಜ್ಯರೇ, ಈ ಮನುಷ್ಯರು ಎಲ್ಲಿಂದ ಹುಟ್ಟುತ್ತಾರೆ?"**

ಸೃಷ್ಟಿಯ ಮೂಲದಿಂದ ಪ್ರಾರಂಭವಾದ ಈ ಜಿಜ್ಞಾಸೆಯು ಕ್ರಮಕ್ರಮವಾಗಿ ಆಳಕ್ಕಿಳಿಯುತ್ತ, ಎಲ್ಲದರ ಮೂಲತತ್ತ್ವವಾದ ಪರಮಪುರುಷನೆಡೆಗೆ ಹೋಗುತ್ತದೆ. ಕಣ್ಣಿಗೆ ಕಾಣುವ ಸ್ಥೂಲ ರೂಪವಾದ ಶರೀರದಿಂದ ಪ್ರಾರಂಭಿಸಿ, ಸೂಕ್ಷ್ಮರೂಪದೆಡೆಗೆ ಸಾಗುತ್ತದೆ. ಇದು ಜ್ಞಾನವನ್ನು ಅರಿಯುವ ಕ್ರಮ. Known to Unknown Method – ಈ ಪದ್ಧತಿಯನ್ನು 'ಜ್ಞಾತದಿಂದ ಅಜ್ಞಾತವನ್ನು ತಿಳಿಯುವ ವಿಧಾನ' ಎಂದು ಇತ್ತೀಚಿನ ಶಿಕ್ಷಣ ತಜ್ಞರೂ ಒಪ್ಪಿಕೊಂಡಿದ್ದಾರೆ.

ಮೊದಲನೇ ಪ್ರಶ್ನೆಗೆ ಗುರುಗಳ ಉತ್ತರ ಹೀಗಿದೆ: ಪ್ರಜಾಪತಿ ಬ್ರಹ್ಮನು ತಪಸ್ಸನ್ನಾಚರಿಸಿ ಸೃಷ್ಟಿಯ ಬೆಳವಣಿಗೆಗಾಗಿ 'ರಯಿ' ಮತ್ತು 'ಪ್ರಾಣ' ವನ್ನು ಸೃಷ್ಟಿಸಿದನು. ರಯಿ ಎಂದರೆ ಚಂದ್ರ; ಪ್ರಾಣ ಎಂದರೆ ಸೂರ್ಯ. ಜಡ ಮತ್ತು ಚೇತನಗಳ ಸಮ್ಮಿಲನದಿಂದಲೇ ಸಮಸ್ತ ಜಗತ್ತು ಸೃಷ್ಟಿಯಾಗಿರುವುದು.

ವಿಶ್ವದಲ್ಲಿರುವ ಸಮಸ್ತ ಸೂಕ್ಷ್ಮ ಹಾಗೂ ಸ್ಥೂಲ ವಸ್ತುಗಳೆಲ್ಲವೂ 'ರಯಿ.' 'ಪ್ರಜಾಪತಿ'ಯೇ ಋತು, ತಿಂಗಳು, ಪಕ್ಷ, ಹಗಲು, ರಾತ್ರಿ ಎಲ್ಲದರ ಸ್ವರೂಪವೂ ಆಗಿರುತ್ತಾನೆ. ಅನ್ನದ ಸ್ವರೂಪವೂ ಆತನೇ. ಅನ್ನದಿಂದಲೇ ರೇತಸ್ಸಿನ ಉತ್ಪತ್ತಿ. ಅದರಿಂದಲೇ ಪ್ರಜೆಗಳು ಉತ್ಪತ್ತಿಯಾಗುವುದು.

ಇದು ಭೌತಿಕ ದೇಹದ ಅರಿವು. ಇದರ ಅರಿವಾದೊಡನೆ, ಇದು ಚೈತನ್ಯಭರಿತವಾಗುವುದು ಯಾವುದರಿಂದ ಎಂಬ ಪ್ರಶ್ನೆ ಹುಟ್ಟುತ್ತದೆ. ಇದೇ ಮುಂದಿನ ಪ್ರಶ್ನೆಯ ವಿಷಯ.